ಪರೇರಾ ಬಂದಿದ್ದ. ಮನೆಯನ್ನು ಹೊಗುತ್ತಲೇ ನಾಲ್ಕು ಕೇರಿ ಒಂದು ಮಾಡುವ ದನಿಯಲ್ಲಿ ತನ್ನ ಬರವನ್ನು ಸಾರುವ ಮ್ಯಾಕೆಲ್ ಕೂಡ ಇವತ್ತು ಮೌನವಾಗಿದ್ದ, ಅಥವಾ ತಮಗೇ ಅಂಥ ಭಾಸವೋ!

''ತಡವಾದದ್ದಕ್ಕೆ ಕ್ಷಮಿಸಬೇಕು, ಗ್ರ್ಯಾಂಡ್‌ಪಾ ನೀವಿಬ್ಬರೂ ಏನು ಹೇಳಲು ಕಾದಿದ್ದೀರಿ ಎನ್ನುವದು ನಮಗೆ ಗೊತ್ತಿದೆ. ಕಟ್ಟಡಕ್ಕೆ ನಾವು ಆಗಲೇ ಬಂದಿದ್ದೆವು. ಕೆಳಗೆ ಬಬನ್ ಭೇಟಿಯಾದ. ಅವನ ಜೊತೆಗೆ ಜಿತೇಂದ್ರನ ಮನೆಗೆ ಹೋಗಿ ಮುದುಕನನ್ನು ಭೇಟಿಯಾಗಿಯೂ ಬಂದೆವು. ಮ್ಯಾಕೆಲ್ ಕೂಡ ಇದ್ದ ನಮ್ಮ ಜೊತೆಗೆ. ನಂಬಲಾಗದ ಕತೆಯಲ್ಲವೆ? ಜಿತೇಂದ್ರ ನನಗೆ ಈ ಮೊದಲೇ ಹೇಳಿದ್ದ. ನಾನು ನಂಬಿರಲಿಲ್ಲ. ಅವನ ಮಕ್ಕಳ ಜೊತೆಗೆ ಇವತ್ತು ಮಧ್ಯಾಹ್ನ ನಡೆದದ್ದರ ಬಗ್ಗೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದೆವು. ನಡುನಡುವೆ ನಾವು ಬಳಸುತ್ತಿದ್ದ ಗುಜರಾಥಿಯಿಂದಾಗಿಯೋ ಏನೋ ಮುದುಕ ಮುಗುಳ್ನಗುತ್ತ ಕೇಳುತ್ತ ಕುಳಿತಿದ್ದ. ಮಧ್ಯಾಹ್ನ ಘಟನೆಗೆ ಸಂಬಂಧವಿದ್ದಂತಿದ್ದ ಡೊಂಬನ ಕತೆ ನನಗೆ ಈ ಮೊದಲು ಗೊತ್ತಿರಲಿಲ್ಲ. ಅದನ್ನು ಜೀತೇಂದ್ರ ಈಗ ಹೇಳಿ ಮುಗಿಸುತ್ತಲೇ, ನಾನೆಂದೆ, 'ಹತ್ತು ವರ್ಷದ ಬಾಲಕನಲ್ಲಿ ಇನ್ನೂ ತನ್ನ ಮಗನನ್ನು ಹುಡುಕ ಬೇಕಾದರೆ – **he must have lost his sense of time**' (ಕಾಲದ ಪ್ರಜ್ಞೆಯನ್ನೇ ಅವನು ಕಳಕೊಂಡಿರಬೇಕು) ಎಂದೆನಷ್ಟೇ. ನಮ್ಮ ಮಾತಿನ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸಿದಂತಿದ್ದ ಮುದುಕ ಏನೆಂದನು ಗೊತ್ತೆ? 'ಛೇ ಛೇ! ಹಾಗಲ್ಲ, ಅವನು ನನ್ನ ಮಗನೆಂದು ತಿಳಿಯಲು ನನಗೇನು ಬುದ್ಧಿಭ್ರಂಶವೆ? ಅವನು ನನ್ನ ಮೊಮ್ಮಗ!' 'ಈ ಸರಳ ಸತ್ಯವನ್ನು ಅರಿತಿರದ ನೀವೇ ಮೋಸಹೋದಿರಿ' ಎನ್ನುವ ಹಾಗೆ ನಮ್ಮ ಕಡೆಗೆ ನೋಡುತ್ತ– ಕಷ್ಟದಲ್ಲಿದ್ದಾಗ ನನ್ನನ್ನು ಬಂದು ಕಾಣಿ ಎಂದಿದ್ದೆ. ಹಾಗೆಂದೇ ಈಗ ತನ್ನ 'ಮಗನನ್ನು ಕಳಿಸಿದ್ದಾನೆ'. ಎಂದಾಗಿನ ಮುದುಕನ ಮೋರೆ ನೋಡಬೇಕಿತ್ತು''. ನಿಂತ ಕಾಲ ಮೇಲೆ, ಒಂದೇ ಉಸಿರಿಗೆ, ಹೇಳಿ ಮುಗಿಸಿದ ಸೋರಾಬ ಎಂದಿನ ಸೋರಾಬನಾಗಿರಲಿಲ್ಲ. ಜಮಶೇದ– ಫ್ರೇನಿಯರಿಗಿಂತ ಅವನೇ ತನ್ನ ಮನಸ್ಸನ್ನು ಹಗುರ ಮಾಡಿಕೊಳ್ಳುವ ಉತಾವಳಿಯಲ್ಲಿದ್ದಂತಿತ್ತು. ನಿಂತೇ ಇದ್ದ ಮ್ಯಾಕೆಲ್‌ನಿಗೆ ಕೂರಲು ಹೇಳಿ, ''ನಾವು ಡ್ರೆಸ್ ಬದಲಿಸಿ ಬರುತ್ತೇವೆ, ಧೋಂಡೂ ಐದು ಗ್ಲಾಸು ತಾ. ಫ್ರಿಜ್‌ನಿಂದ ಸೋಡಾ ತೆಗೆ'' ಎಂದವನೇ ಡಾಯನಾಳ ಜೊತೆಗೆ ಮಲಗುವ ಕೋಣೆಗೆ ನಡೆದ.

"ಸೋರಾಬನೇ ಹೇಳಲಿ, ಅವನ ಬಗ್ಗೆ ಬಂದು ಬಿದ್ದ 'ಬ್ಯಾಂಡ್ ಸ್ಟ್ಯಾಂಡ್ ನ್ಯೂಸ್'ನ್ನು ಪುನಃ ಆರಂಭಿಸಲು ಇದಕ್ಕಿಂತ ದೊಡ್ಡ ಪ್ರೇರಣೆ ಸಿಗಲಾರದು. ಬ್ಯಾಂಡ್ ಸ್ಟ್ಯಾಂಡಿನ ಪ್ರತಿಯೊಬ್ಬನಿಗೂ ಈ **wise oldman** ಬಗ್ಗೆ ಗೊತ್ತಾಗಬೇಕು. ಅವನ ಜತೆಗಿದ್ದ ಎರಡು ತಾಸುಗಳಲ್ಲಿ ನಾನು ಮಾಡಿದ ನಿರ್ಧಾರವಿದು. ಇಷ್ಟು ವರ್ಷ ಮಗನ ಶೋಧದಲ್ಲಿದ್ದವನೇ ಈಗ ತನ್ನ ಮೊಮ್ಮಗನು ನಡೆಸಿದ ಶೋಧಕ್ಕೆ ತಾನು ಲಕ್ಷ್ಯವಾಗಿರುವೆನೆಂದು ತಿಳಿದ ಮುದುಕನೊಬ್ಬನ ಒಂದು ಇನ್ನೊಂದಾಗಿ ಮುಂದುವರಿಯುತ್ತಿರುವ ಈ ಅದ್ಭುತ ಕತೆ ಇಲ್ಲಿಯ ಜನಕ್ಕೆ ಮುಟ್ಟಬೇಕು. ಅವನ ಮಕ್ಕಳಿಂದ. ಸೋರಾಬನಿಂದ ಎಲ್ಲವನ್ನೂ ಮೊದಲು ನಾನೇ ತಿಳಿದುಕೊಳ್ಳಬೇಕು.' ಮುದುಕ – ಮುದುಕಿಯರಿಗೆ ಹೇಳುತ್ತಿದ್ದಾಗಲೇ ಹಗಲುಗನಸು ಕಾಣತೊಡಗಿದ ಮ್ಯಾಕ್‌ನ ಮಾತು. ಸೋರಾಬ–ಡಾಯನಾ ಡ್ರೆಸ್ಸು ಬದಲಿಸಿ ಹೊರಗೆ ಬಂದಾಗ, ಅರ್ಧಕ್ಕೇ ಉಳಿಯಿತು.

ಸೋರಾಬ ತನ್ನ ಮಿನಿಬಾರ್‌ನಿಂದ ವಿಸ್ಕಿ, ಜಿನ್ ಬಾಟಲಿಗಳನ್ನು ಹೊರತೆಗೆದು ಫ್ರೇನಿ– ಡಾಯನಾರ ಸಲುವಾಗಿ ಜಿನ್–ಲ್ಯಾಮ್–ಸೋಡಾಗಳನ್ನೂ, ತನ್ನ ಹಾಗೂ ಜಮಶೇದ್–